ತಾಪತ್ರಯ ಅಯ್ಯಂಗಾರ್ ಎಂದು ಜನಪ್ರಿಯರಾಗಿದ್ದ **ಕೃಷ್ಣಯ್ಯಂಗಾರ್ಯರು** 79ನೇ ವಯಸ್ಸಿನಲ್ಲಿ ಮೈಸೂರಿನಲ್ಲಿ ಜನವರಿ 21. ಸ್ಕೌಟ್ ಮಾಸ್ಟರು, ಸ. ಡಿ. ಸ್ಕೌಟ್ ಕಮಿಷನರ್, ಹೈಸ್ಕೂಲ್ ಹೆಡ್ಮಾಸ್ಟರಾಗಿದ್ದರು.

ದಿವಗಂತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಇವರ ಬಾಳಿನ ಆದರ್ಶಗಳು ತರುಣರಿಗೆ ದಾರಿದೀವಿಗೆಯಾಗಲಿ ಎಂದು ಹಾರೈಸುತ್ತೇವೆ.

Sri M. K. Venkateshan, Commissioner for Finance, Govt. of Karnataka, appreciating the Camp Fire.



Sri N. Narasimha Rao, Chief Secretary to Govt. Laying the Foundation-stone.

Sri K. S. Shankar explaining to Sri N. Narasimha Rao, Chief Secretary to Govt. of Karnataka about the daily routine and the activities.

Parents - Guides at the Parent's evening

Scouts introducing themselves before commencing the match.

ಜಾಂಬೋರೆಟ್‌ನಲ್ಲಿ ಸೌಟ್ ಮತ್ತು ಗೈಡ್‌ಗಳ ಕೌಶಲ್ಯ

"ಸ್ಕಿಲೋಂರಾಮಾ"

ಹೇಮವೇ ಹೊಳೆಯಾಗಿ ಹರಿದು ಸಕಲೈಶ್ವರ್ಯ ಬೀಡಾಗಿ ಮಾಡಿದ ಸಕಲೇಶಪುರದ ಸ್ಕೌಟ್ ಮತ್ತು ಗೈಡ್‌ಗಳ 15ನೇ ಜಾಂಬೋರಿಯ ಕಾರ್ಯಕ್ರಮದಲ್ಲಿ ಮಕ್ಕಳ ಸ್ಕೌಟ್ ಮತ್ತು ಗೈಡ್‌ಗಳ ಕೌಶಲ್ಯದ ಪ್ರದರ್ಶನ (Skill-o-Rama) ಮಕ್ಕಳ ಪ್ರತಿಭೆಯ ಪ್ರತೀಕವಾಗಿದೆ. ರಾಜ್ಯದ ವಿವಿಧ ಜಿಲ್ಲೆಯ ಸ್ಪರ್ಧೆಗಳು, ಅದ್ವಿತೀಯ ಹಾಗೂ ಸ್ಮರಣೀಯ ಕೌಶಲ್ಯ ಪ್ರದರ್ಶನ ವಸ್ತು, ಸ್ಕೌಟಿಂಗ್ ಇತಿಹಾಸದಲ್ಲಿ ಅಪೂರ್ವಕವಾಗಿದೆ.

ಈ ಕೌಶಲ್ಯ ಪ್ರದರ್ಶನದಲ್ಲಿ ಕಾರ್ಯಾನುಭಾವವನ್ನು ಒಳಗೊಂಡ ಕೌಶಲ್ಯ ಅಭಿವ್ಯಕ್ತವಾಗಿತ್ತು. ಈ ರೀತಿಯ ಕೌಶಲ್ಯ ಪ್ರದರ್ಶನದಲ್ಲಿ ಎಲೊಕ್ಟ್ರಾನಿಕ್ಸ್ ರಂಗೋಲಿ, ಚಿತ್ರಕಲೆ, ಪೈಂಟಿಂಗ್ಸ್, ಕಸೂತಿಕೆಲ್ಸ, ಮಾಡೆಲ್ ತಯಾರಿ, ಯನ್‌ಗ್ರೆವಿಂಗ್, ಮರದ ಕೆತ್ತನೆ, ಚಿಪ್ಪು ಮತ್ತು ಜೇಡಿ ಮಣ್ಣಿನಲ್ಲಿ ಆಟದ ಸಾಮಾನುಗಳ ಮಾಡುವಿಕೆ, ಬುಕ್ ಬೈಂಡಿಂಗ್, ಚರ್ಮದ ವಸ್ತುಗಳ ತಯಾರಿಕೆ, ವಯರ್ ಮತ್ತು ನಾರಿನ ಹೆಣಿಗೆ, ಪ್ಲಾಸ್ಟರ್ ಕ್ಯಾಸ್ಟಿಂಗ್ ಮುಂತಾದ ವಿಭಾಗಗಳಲ್ಲಿ ಕೌಶಲ್ಯಮೂಡಿ ಪ್ರತಿಭೆಯ ಪರಿಚಯ ಜಾಂಬೋರಿಯ ವೀಕ್ಷಕರಿಗೆ ಸವಿಯುವ ಸುಸಮಯವಾಗಿತ್ತು.

"ಎಲೊಕ್ಟ್ರಾನಿಕ್ಸ್"ನಲ್ಲಿ ವಿವಿಧ ಕೌಶಲ್ಯದ ಪ್ರದರ್ಶನದಲ್ಲಿ ರವಿ ಪೈಲೂರ್ 9ನೇ ತರಗತಿ, B.E.L., H.S. B'lore ನಾರ್ತ್, ಈತನ ನಾಯಕತ್ವದಲ್ಲಿ ವಿವಿಧ ವಿಜ್ಞಾನದ ಉಪಕರಣಗಳು ಜ್ಞಾನವಿಜ್ಞಾನದ ಬೆಳವಣಿಯ ಸಾಕ್ಷಿಯಂತೆ ಇದ್ದವು. ಅವುಗಳಲ್ಲಿ ಈ ಕೆಳಗಿನವುಗಳ ಸೃಷ್ಟಿ ಮತ್ತು ಕೌಶಲ್ಯ ಸ್ಕೌಟಿಂಗ್‌ನ ನಿಜವಾದ ಪ್ರತಿಭೆಯನ್ನು ಹೊರಹೊಮ್ಮಿಸುತ್ತಿತ್ತು. ಕು॥ ಪೈಲೂರ್‌ರವರ ನಾಯಕತ್ವದಲ್ಲಿ ಆದ ಉಪಕರಣ ಈ ರೀತಿ ಇದೆ.

1) ಕಲರ್ ಕಾಂಬಿನೇಷನ್ಸ್—ಇದು ಬಣ್ಣದ ವಿಂಗಡನೆಗೆ ಉಪಯೋಗಿಸುವ ಸಾಧನವಾಗಿದೆ.
2) ಎಲೊಕ್ಟ್ರಾನಿಕ್ ಟೈಮರ್—ಇದು ನಿಗದಿಪಡಿಸಿದ ಸಮಯವನ್ನು ಸೂಚಿಸುವ ಸಾಧನವಾಗಿದೆ.
3) ಫಿಶ್ ಕಾಲರ್–ಮೀನುಗಳನ್ನು ಆಕರ್ಷಿಸುವ ಸಾಧನ.
4) ಪ್ರಾಕ್ಟೀಸ್ ಆಸಿಲೇಶನ್—ಸ್ಯಾಮಫೋರ್ ಸಿಗ್ನಲಿಂಗ್‌ನ್ನು ಕಲಿಸಲು ಉಪಯೋಗಿಸುವ ಸರಳ ಮಾರ್ಗದರ್ಶಿ.
5) ಲೈಟ್ ಆಪರೇಟರ್ ಸ್ವಿಚ್—ಇದು ಪ್ರಕೃತಿಯ ಬೆಳಕಿನಲ್ಲಿಯೇ ಉರಿಯುವ ದೀಪ.
6) ಎಲೊಕ್ಟ್ರಾನಿಕ್ ಬರ್ಡ್—ಇದು ಶಬ್ಧ ಸೂಚಕ ಸಾಧನ. ಶಬ್ದದ ಅಧಿಕ ತರಂಗಗಳನ್ನು ಅಲ್ಪ ವಿದ್ಯುತ್ತಿನಿಂದ ಇದು ಬಹಳ ಕಾಲ ಕೇಳುವ ಸಾಧನವಾಗಿದೆ.
7) ಯಮರ್ಜೆನ್ಸಿ ಲ್ಯಾಂಪ್—ವಿದ್ಯುಚ್ಛಕ್ತಿ ಆರಿದಾಗ ಅಂತಹ ತುರ್ತು ಕಾಲದಲ್ಲಿ ವಿದ್ಯುತ್ ಇಲ್ಲದೇ ತನ್ನಷ್ಟಕ್ಕೆ ತಾನೇ ಬೆಳಕನ್ನು ನೀಡುವ ಸಾಧನ.
8) ನಿಯೋ ಲೈಟ್—ಟ್ರಾನ್ಸ್‌ಫಾರ್‌ಮರ್ ಇಲ್ಲದೇ ಚಿಕ್ಕ ದೀಪವನ್ನು ಡೈರೆಕ್ಟ್ ಮೈನ್‌ಗಳಿಂದ ಉಪಯೋಗಿಸುವ ಸಾಧನ.

ಈ ಮೇಲ್ಕಂಡ ಉಪಕರಣಗಳ ತಯಾರಿಕೆಗೆ ಮತ್ತು ಮಾರ್ಗದರ್ಶನಕ್ಕೆ ಮಾರ್ಗದರ್ಶಿ ಎನ್ನುತ್ತಾನೆ, ಶ್ರೀಯುತ

ಎಸ್. ಕೆ. ಮೂರ್ತಿ, ಸ್ಕೌಟ್ ಮಾಸ್ಟರ್, ಎಲೋಕ್ಟ್ರಾನಿಕ್ ವಿಭಾಗದ ಮುಖ್ಯಸ್ಥರು, B.E.L., B'lore ನಾರ್ತ್.

ಕೌಶಲ್ಯದ ಪ್ರದರ್ಶನದಲ್ಲಿ ವಿಜ್ಞಾನದ ಉಪಕರಣಗಳನ್ನು ನಿರ್ಮಿಸಿದ ರೀತಿಯಲ್ಲಿಯೇ ಕಲೆಯಲ್ಲಿನ ಉಪಕರಣ ಮತ್ತು ಕೌಶಲ್ಯದ ಪ್ರದರ್ಶನ ವೀಕ್ಷಕರಿಗೆ ಅನುಕರಣೀಯವಾಗಿತ್ತು.

ಚಿತ್ರಕಲೆಯಲ್ಲಿ ಬೆಂಗಳೂರು ದಕ್ಷಿಣ ವಿಭಾಗದ ಸ್ಕೌಟ್‌ಗಳು, ಮತ್ತು ಚಿಕ್ಕಮಗಳೂರಿನ ಸ್ಕೌಟ್‌ಗಳ ಚಿತ್ರಗಳು ಯೋಗ್ಯವಾದ ಬಣ್ಣ ಮತ್ತು ರಚನೆಯದ್ದಾದರೆ, ತುಮಕೂರು ಜಿಲ್ಲೆಯ ಚರ್ಮದ ವಸ್ತುಗಳ ತಯಾರಿ, ಧಾರವಾಡದ ಬಡಗಿ ಕೆಲ್ಸದ ವಸ್ತುಗಳು, ಬಳ್ಳಾರಿಯವರ ಬುಕ್‌ಬೈಂಡಿಂಗ್, ಹಾಗೂ ಬಳ್ಳಾರಿಯ M.C.J. ಕಾಲೇಜಿನ ಕಲ್ಲಿನಲ್ಲಿ ಕೆತ್ತನೆ ಕೆಲ್ಸದ ವಿವಿಧ ನಮೂನೆಗಳು ಸ್ಕೌಟ್‌ವತಿಯಿಂದ ಪ್ರದರ್ಶಿಸಿ ಹೆಚ್ಚಿನ ಸ್ಕೌಟ್ ಮತ್ತು ಗೈಡ್‌ಗಳ ಮೆಚ್ಚುಗೆಯನ್ನು ಗಳಿಸಿತು.

ಸ್ಕೌಟ್‌ಗಳಂತೆಯೇ ಗೈಡ್‌ಗಳು ತಮ್ಮ ಕೌಶಲ್ಯದ ಪ್ರತಿಭೆಯನ್ನು ಚಿಕ್ಕಮಗಳೂರು ಜಿಲ್ಲೆಯ ಗೈಡುಗಳು ಜೇಡಿ ಮಣ್ಣಿನಲ್ಲಿ ಮಾಡಿದ ಮಾಡೆಲ್‌ಗಳು ಮತ್ತು ರಂಗೋಲಿ, ಹಾಸನ ಜಿಲ್ಲೆಯವರ ರಂಗೋಲಿ, ಧಾರವಾಡ ಜಿಲ್ಲೆಯವರ ಆಟದ ಉಪಕರಣಗಳ ತಯಾರಿಕೆ, ಬೆಂಗಳೂರು ನಾರ್ತ್ ಜಿಲ್ಲೆಯವರ ಹೊಲಿಗೆ, ಕಸೂತಿ, ಪೆಯಿಂಟಿಂಗ್ ಮುಂತಾದವು, ತುಮಕೂರು ಜಿಲ್ಲೆಯವರ ಪ್ಲಾಸ್ಟಿಕ್ ವೈಯರ್‌ನಿಂದ ಮಾಡಿದ ಹೆಣಿಗೆ ಕೆಲ್ಸಗಳು, ಶಿವಮೊಗ್ಗ ಜಿಲ್ಲೆಯವರು ನಿರ್ಮಿಸಿದ ಪೈಯಿಂಟಿಂಗ್‌ಗಳು ದಕ್ಷಿಣ ಕನ್ನಡ ಜಿಲ್ಲೆಯವರು ಚಿಪ್ಪಿನಿಂದ ತಯಾರಿಸಿದ ಆಟದ ಸಾಮಾನುಗಳು, ಪ್ಲಾಸ್ಟರ್ ಕ್ಯಾಸ್ಟಿಂಗ್ ಹಾಗೂ ಬುಕ್ ಬೈಂಡಿಂಗ್ ಅತ್ಯುತ್ತಮವಾದ ಕೌಶಲ್ಯದ ಮೈಲಿಗಲ್ಲುಗಳಾಗಿದ್ದವು.

ಸ್ವಾಗತವ ಬೀರುವೆವು - ಇಂದಿನ ದಿನ

ನಾವೆಲ್ಲಾ ಮರಿಗಳು
ಜಿಂಕೆಯಂತೆ ಹಾರುವೆವು
ಸ್ವಾಗತವ ಬೀರುವೆವು
ಇಂದಿನಾ ದಿನ ಇಂದಿನಾ ದಿನ 1

ನಾವೆಲ್ಲ ಬುಲ್ ಬುಲ್‌ಗಳು
ಕೋಗಿಲೆಯಂತೆ ಹಾಡುವೆವು
ಸ್ವಾಗತವ ಬೀರುವೆವು
ಇಂದಿನಾ ದಿನ ಇಂದಿನಾ ದಿನ 2

ನಾವೆಲ್ಲ ಸ್ಕೌಟುಗಳು
ಉಪಕಾರ ಮಾಡುವೆವು
ಸ್ವಾಗತವ ಬೀರುವೆವು
ಇಂದಿನಾ ದಿನ ಇಂದಿನಾ ದಿನ 3

ನಾವೆಲ್ಲ ಗೈಡುಗಳು
ಸೇವೆಯನು ಮಾಡುವೆವು
ಸ್ವಾಗತವ ಬೀರುವೆವು
ಇಂದಿನಾ ದಿನ ಇಂದಿನಾ ದಿನ 4

ಭಾರತ್ ಸ್ಕೌಟು ಗೈಡುಗಳು
ಸೇರುತಿಲ್ಲಿ ನಲಿಯುವೆವು
ಸ್ವಾಗತವ ಬೀರುವೆವು
ಇಂದಿನಾ ದಿನ ಇಂದಿನಾ ದಿನ 5

ವಿ. ತ್ಯಾಗರಾಜು, ಕಬ್ ಮಾಸ್ಟರ್, ಬೆಂಗಳೂರು,

ಸುದ್ದಿ ಸಮಾಚಾರಗಳು

ಎಂಟನೆಯ ರಾಷ್ಟ್ರೀಯ ಸ್ಕೌಟ್-ಗೈಡ್ ಜಾಂಬೋರಿಯು ತಮಿಳುನಾಡಿನಲ್ಲಿ 1979 ಜನವರಿಯಲ್ಲಿ ಮದ್ರಾಸಿಗೆ 50 ಕಿ ಮೀ. ದೂರವಿರುವ ಚಂಗಲ್ಪೇಟ್ ಸಮೀಪದ ಮೇಲು ಮಲ್ಯೆನಗರದ ಬಳಿ ನಡೆಯುವುದು. ವಿವರಗಳನ್ನು ಕ್ರಮೇಣ ತಿಳಿಸಲಾಗುವದು. ಕರ್ಣಾಟಕದ ಸ್ಕೌಟು–ಗೈಡುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಇಪ್ಪತ್ತೊಂದನೆಯ 'ಜಾಂಬೋರಿ ಆನ್ ದಿ ಏರ್' (JOTA) ರೇಡಿಯೋ ಮೇಳ ಕಾರ್ಯಕ್ರಮವು1978 ಅಕ್ಟೋಬರ್ 21-22 ನಡೆಯುವದು. ಕರ್ಣಾಟಕದಲ್ಲಿ ಈ ಆಕಾಶವಾಣಿ ಸ್ಕೌಟ್-ಗೈಡ್ ಅಂತರರಾಷ್ಟ್ರೀಯ ಕಾರ್ಯಕ್ರಮವು ಈಚಿನ ವರ್ಷಗಳಲ್ಲಿ ತಪ್ಪದೆ ಕೇಂದ್ರಕಛೇರಿಯಲ್ಲಿಯೂ, ಬಿ.ಇ.ಎಲ್. ಸ್ಕೌಟ್-ಗೈಡ್ ದಳದಲ್ಲಿಯೂ ಸತತ ನಡೆಯುತ್ತದೆ. ಯಾವ ದಳದ ಮಕ್ಕಳೂ ಹಿರಿಯರೂ ಇದರಲ್ಲಿ ಭಾಗವಹಿಸಬಹುದು.

ಬೇಡೆ೯ಪೊವೆಲ್ಲರುಗಳ ಸ್ಮರಣ ದಿನಾಚರಣೆಗಳು : ಫೆಬ್ರವರಿ 22 : ಸ್ಕೌಟ್-ಗೈಡ್ ಸ್ಥಾಪನಾಚಾರ್ಯ ಲಾರ್ಡ್ ಬೇಡೆ೯ಪೊವೆಲ್ಲರ ಹಾಗೂ ಆತನ ಪತ್ನಿ ಲೇಡಿ ಓಲೇವ್ ಬೇಡೆ೯ಪೊವೆಲ್ಲರ ಜನ್ಮದಿನ. ವಿಶ್ವಾದ್ಯಂತ ಈ ದಿನವನ್ನು ಸ್ಕೌಟ್-ಗೈಡ್‌ಗಳು ಕೃತಜ್ಞತೆಯಿಂದಲೂ ಸಂಭ್ರಮದಿಂದಲೂ ಆಚರಿಸುತ್ತಾ ಬಂದಿದ್ದಾರೆ. ಆದರೆ ಇದೇ ಮೊದಲ ಬಾರಿಗೆ ಲೇಡಿ ಬಿ. ಪಿ. ಇಲ್ಲದೆ ಈ ಆಚರಣೆ ನಡೆಯುತ್ತಿದೆ. ರಾಜ್ಯದ ನಾನಾ ಕಡೆಗಳಿಂದ ವರದಿಗಳು ಇದರ ಬಗೆಗೆ ಬರುತ್ತಿವೆ.

ಬೆಂಗಳೂರು ಉತ್ತರ ಜಿಲ್ಲೆಯ ಲಾಲ್‌ಬಹದೂರ್ ಶಾಸ್ತ್ರೀಜಿ ಸ್ಕೌಟ್ ಮತ್ತು ಬಹದೂರ್ ಗೈಡ್ ಮಂಡಲಗಳು ಫೆ. 22ರ ಸಂಜೆ ನಗರದ ಕೇಂದ್ರ ಕಛೇರಿಯ ಆವರಣದಲ್ಲಿ ಜಿಲ್ಲಾ ಕಮಿಷನರ್ ಮೇಜರ್ ನಾರಾಯಣ್ ಸಿಂಗ್‌ರವರಿಂದ ದಿವ್ಯ ಶಿಬಿರಾಗ್ನಿ ಪ್ರಜ್ವಲಿಸಿ, ಒಂದು ಸಂಸ್ಮರಣ ಸಂಚಿಕೆಯನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ. ಬಿ. ಷಣ್ಮುಖಪ್ಪನವರಿಂದ ಬಿಡುಗಡೆಗೊಳಿಸಿದರು. ಸ್ಕೌಟ್ ಮಂಡಲದ 11ನೆಯ ಹಾಗೂ ಗೈಡ್ ಮಂಡಲದ 3ನೆಯ ವರ್ಧಂತಿಗೆ ಹೊಂದಿದ ಈ ಸಮಾರಂಭಕ್ಕೆ ಹಿತೈಷಿ ಶ್ರೀ ಡಿ. ಎಸ್. ನಾಗೇಶ್ವರನ್ ಅಧ್ಯಕ್ಷರಾಗಿದ್ದರು.

ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾ। ಶಿರಗುಪ್ಪ ಪಂಡಿತ್ ನೆಹರೂ ಹೈಸ್ಕೂಲಿನ ನೆಹರು ಟ್ರೂಪ್ ಮತ್ತು ಪ್ರತಾಪ ಟ್ರೂಪುಗಳು ಸೇರಿ ಪ್ರಧಾನಗುರುಗಳೂ ಜಿಲ್ಲಾ ಕಾರ್ಯ ನಿರ್ವಾಹಕ ಮಂಡಲಿ ಸದಸ್ಯರೂ ಆದ ಶ್ರೀ ವ್ಹಿ. ಕೆ. ನಾಗನೂರರ ಸಮ್ಮುಖದಲ್ಲಿ ಸ್ಕೌಟರ್ ಎಂ. ಎಫ್. ಶಿವನಗೌಡರ ನೇತೃತ್ವದಲ್ಲಿ ವಿವಿಧಕಾರ್ಯಕ್ರಮುಗಳನ್ನು ಏರ್ಪಡಿಸಿದ್ದರು.

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ಸ್ಥಳೀಯ ಸಂಸ್ಥೆ ಏರ್ಪಡಿಸಿದ್ದ ಕಾರ್ಯಕ್ರಮಗಳ ಅಂಗವಾಗಿ ಸ. ಸ್ಕೌ. ಕ. ಶ್ರೀ ಕೆ. ಆರ್. ತ್ಯಾರಣಗಿಯವರಿಂದ ಧ್ವಜಾರೋಹಣ, ಪ್ರಭಾತಫೇರಿ, ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸ. ವಿದ್ಯಾಧಿಕಾರಿ ಶ್ರೀ ಕೆ. ಬಿ. ರಾಮಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಶಾಲಾ ತನಿಖಾಧಿಕಾರಿ ಶ್ರೀ ಎಂ. ಕೆ. ವಿರೂಪಾಕ್ಷಪ್ಪನವರು ಬೇಡೆ೯ಪೊವೆಲ್ ದಂಪತಿಗಳ ಜೀವನ ಪರಿಚಯ ಮಾಡಿಸಿದರು. ತಹಶೀಲ್ದಾರ್ ಶ್ರೀ ಎಸ್. ಶಿವಾನಂದಶರ್ಮರು ಮುಖ್ಯ ಅತಿಥಿಗಳಾಗಿದ್ದು ಜೂ. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಗೋಪಾಲಕೃಷ್ಣ ಕೆದಿಲಾಯರು ಸಂಸ್ಥೆಯ ಧ್ಯೇಯವನ್ನು ವಿವರಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಅಧ್ಯಾಪಕ ಸ್ಕೌಟ್ ಸೇವಾನಿಷ್ಠ

ಶ್ರೀ ಜಿ. ಲಘುಮಣ್ಣನವರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ಜಿ. ಸಿದ್ದಪ್ಪನವರಿಂದ ಸ್ವಾಗತವೂ ಎ. ಚೆನ್ನಬಸಪ್ಪನವರಿಂದ ವಂದನಾರ್ಪಣೆ ಆದುವು. ಸಂಜೆಯ ಶಿಬಿರಾಗ್ನಿಯು ಬಿ.ಡಿ.ಓ. ಶ್ರೀ ಜಿ. ಶಿವಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕು ಮುರೂರು ಪ್ರಗತಿ ವಿದ್ಯಾಲಯದ ಮಕ್ಕಳು ಚಂಡ ಮಾರುತ ಸಂತ್ರಸ್ತರ ನಿಧಿಗೆಂದು ರೂ. 70-00 ಸಂಗ್ರಹಿಸಿ ಮುರಾರ್ಜಿ ದೇಶಾಯಿಯವರಿಗೆ ಕಳಿಸಿಕೊಟ್ಟಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ಸೈಂಟ್ ಸಿಸಿಲೀಸ್ ಕಾನ್ವೆಂಟಿನ ಕ್ರೀಡಾಂಗಣದಲ್ಲಿ ಫೆ. 27ರ ಅಪರಾಹ್ನ ಜಿಲ್ಲಾ ಗೈಡ್ ಕ॥ ರೆ. ಸಿಸ್ಟರ್ ವಿನ್ಸಿಂರ್ಸ್ಯೂ ಅವರ ಅಧ್ಯಕ್ಷತೆಯಲ್ಲಿ **ಜಿಲ್ಲಾ ಕಬ್ ಮತ್ತು ಬುಲ್‌ಬುಲ್ ಉತ್ಸವವನ್ನು** ಎಂ. ಜಿ. ರಾವ್ ಮತ್ತು ಶಾಂತಿ ಡಿ. ಶೆಣೈ ಅವರುಗಳು ಯೋಜಿಸಿದ್ದರು, ಮಣಿಪಾಲ ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಪ್ರೊ. ವಿ. ಚಂದ್ರಶೇಖರರು ಮುಖ್ಯ ಅತಿಥಿಗಳಾಗಿದ್ದರು.

ಬೆಂಗಳೂರು ಉತ್ತರ ಜಿಲ್ಲೆಯ ಸ್ಕೌಟು ಗೈಡುಗಳು ಸಕಲೇಶಪುರದ ರಾಜ್ಯ ಜಾಂಬೊರೆಟ್‌ನಲ್ಲಿ ಅತ್ಯುತ್ತಮ ಜಿಲ್ಲಾ ಘಟಕವೆಂಬ ಸಾಧನೆಗಳಿಸಿದ್ದಕ್ಕಾಗಿ ಇವರನ್ನೆಲ್ಲಾ ರಾಜ್ಯ ಪ್ರಧಾನ ಕ॥ ಕೊಂಡಜ್ಜಿಯವರು ಫೆ. 11ರ ಸಂಜೆ ಕೇಂದ್ರ ಕಛೇರಿಯ ಆವರಣದಲ್ಲಿ ಅಭಿನಂದಿಸಿದರು. ಅತಿ ಹೆಚ್ಚುಗೆಯಾಗಿ ಹೆತ್ತವರೂ ಪಾಲಕರೂ ಬಂದಿದ್ದ ಈ ಸಭೆಯ ಆತಿಥ್ಯವನ್ನು ಜಿಲ್ಲಾ ಸಂಸ್ಥೆ ಏರ್ಪಡಿಸಿದ್ದು ಶ್ರೀ ಜಿ. ಶಿವಪ್ಪನವರು ಅಧ್ಯಕ್ಷತೆ ವಹಿಸಿದ್ದರು.

"ಸಾಗರದ ಜೀವನ" ಕುರಿತು ನಡೆಸಿದ ಅಂತ ರಾಷ್ಟ್ರೀಯ ಚಿತ್ರ ಬರೆಯುವ ಸ್ಪರ್ಧೆಯಲ್ಲಿ 12 ರಾಷ್ಟ್ರಗಳ ಸ್ಕೌಟುಗಳೂ ಭಾಗವಹಿಸಿದ್ದರು. ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟ 16 ವಿಜೇತರಲ್ಲಿ ನಾಲ್ವರು ಸ್ಕೌಟುಗಳು ಸೇರಿದ್ದಾರೆ.

"ರೈಲ್ವೆ ಸೇವಾದಿನ" ಆಗಿ 78 ಫೆ. 19ನ್ನು ರಾಷ್ಟ್ರಾದ್ಯಂತ ಆಚರಿಸಿದಾಗ ಅನೇಕ ಕಡೆ ಸ್ಕೌಟ್-ಗೈಡ್‌ಗಳು ಸೇವೆಸಲ್ಲಿಸಿದರು.

ಸ್ಕೌಟುಗಳು ತಯಾರಿಸಿದ ಚಲನ ಚಿತ್ರ "ಯೂತ್ ಮೂವ್ಸ್ ಆನ್" ('ಯುವಕರು ಮುನ್ನಡೆಯುತ್ತಿದ್ದಾರೆ') ಎಂಬುದು ಈಚೆಗೆ ದೆಹಲಿಯಲ್ಲಿ ನಡೆದ ಚಲನಚಿತ್ರ ಸ್ಪರ್ಧೆಯಲ್ಲಿ ಉತ್ತಮ ಮಟ್ಟದ ತಾಂತ್ರಿಕ ಚಿತ್ರವೆಂದು ಘೋಷಿಸಲ್ಪಟ್ಟು ಮನ್ನಣೆ ಪಡೆದಿದೆ.

ರೋವರಿಂಗ್ ವಜ್ರಮಹೋತ್ಸವ (1978-79) ನೆನಪಿದೆಯೇ? ಈಬಗೆಗೆ ಏನು ಯೋಚನೆ ಮಾಡಿದ್ದೀರಿ ?

ಧಾರವಾಡ (ಪಶ್ಚಿಮ) ಜಿಲ್ಲಾ ಅಣ್ಣಿಗೇರಿ ತಾ॥ ತಿರ್ಲಾಪೂರ ವೆಂಕಟೇಶ ಸ್ಕೌಟ್‌ದಳದವರು: 1977-78 ರಲ್ಲಿ ಪ್ರತಿಯೊಂದು ರಾಷ್ಟ್ರೀಯ ಹಬ್ಬ ಮತ್ತು ಸಾಮಾಜಿಕ ಧಾರ್ಮಿಕ ಕಾರ್ಯದಲ್ಲಿ ಉತ್ತಮ ರೀತಿಯ ಸೇವೆಯನ್ನು ಸಲ್ಲಿಸಿದ್ದಾರೆ. ಫೆ. 22ರಂದು ಬೇಡನ್‌ಪೊವೆಲ್‌ರ ಹುಟ್ಟುಹಬ್ಬವನ್ನು ಆಚರಿಸಿ ಅಂದು ಊರಲ್ಲಿ ಮಾರ್ಚಿಂಗ್ ಧ್ವಜಾರೋಹಣ, ಶ್ರೀ ಪೊವೆಲ್ಲರ ಚರಿತ್ರೆ ಬರಹ ಸ್ಪರ್ಧೆಯನ್ನು ಇಟ್ಟು ಶ್ರೀ ಹೆ. ಮಾ. ರವರ ಅಧ್ಯಕ್ಷತೆಯಲ್ಲಿ ರಾತ್ರಿ ಶಿಬಿರಾಗ್ನಿ ಕಾರ್ಯಕ್ರಮವನ್ನು ಇಟ್ಟುಕೊಂಡು ಒಳ್ಳೆ ಹುರುಪಿನಿಂದ ಆಚರಿಸಿದರು. ಯಾವತ್ತು ಸ್ಕೌಟರುಗಳೊಂದಿಗೆ ಚರ್ಚಿಸಿ ಹೊಸದಾಗಿ ಪೆಟ್ರೋಲ್ ಮತ್ತು ಟ್ರುಪ್ ಲೀಡರರನ್ನು ಆಯ್ಕೆ ಮಾಡಿದರು.

ಚಿತ್ರದುರ್ಗದ ಬಿ.ಪಿ. ಸ್ವತಂತ್ರ ದಳದ ಸ್ಕೌಟ್‌ಗಳೂ ಮದಕರಿ ರೋವರ್‌ಗಳೂ ಒಟ್ಟು 15 ಜನ 7 ಮೈಲಿಗಳ ದೂರದ ಜೋಗಿ ಮಟ್ಟಿಗೆ ತಾ–4–12–77 ರಂದು ಪೊರಸಂಚಾರ ಹೋಗಿದ್ದರು. ಮೂರು ಮೈಲಿ ಕಾಡು ಮಲ್ಲೇಶ್ವರನ ದೇವಸ್ಥಾನದ ವರೆಗೆ ಟ್ರಾಕಿಂಗ್ ಗುರುತುಗಳನ್ನು ಉಪಯೋಗಿಸಿದರು. ಮುಂದೆ "ಹಿಮವತ್ಕೇದಾರ" ಎಂಬಲ್ಲಿ ಅವರು ಅಲ್ಲಿ ಬಸವನ ಬಾಯಲ್ಲಿ ನೀರು ಬರುವುದನ್ನು ನೋಡಿ ಆನಂದಿಸಿದರು. ನಂತರ ಜೋಗಿಮಟ್ಟಿಗೆ ಹೋಗಿ, ಸಂಜೆ 6 ಗಂಟೆಗೆ ವಾಪಸ್ಸು ಹಿಂದಿರುಗಿದರು, ನಾಯಕತ್ವವನ್ನು ರೋವರ್ ಜೆ. ಎಸ್. ವೆಂಕಟೇಶ್ ವಹಿಸಿದ್ದರು.

ಚಿಕ್ಕಮಗಳೂರು ತಾಲೂಕು ದೇವರಹಳ್ಳಿ ಗ್ರಾಮದಲ್ಲಿ ಗ್ರಾಮಾಂತರ ಸ್ಥಳೀಯ ಸಂಘದ ಆಶ್ರಯದಲ್ಲಿ ಸ್ಕೌಟ್ ಬಾಲಕ ಬಾಲಕಿಯರ ಮೇಳ

ತಾ॥ 13-2-78ರ ಬೆಳಿಗ್ಗೆ ಹತ್ತು ಘಂಟೆಗೆ ದೇವರ ಹಳ್ಳಿ-ಲಕ್ಯಾಕ್ಯಾತನಬೀಡು- ಹಳೇ ಲಕ್ಯಾ-ಚಿಕ್ಕಗೌಜ–ಹಿರೇಗೌಜ ಶಾಲೆಗಳಿಂದ ಸಮವಸ್ತ್ರಧಾರಿಗಳಾದ 300 ಬಾಲಕ ಬಾಲಕಿಯರು ತಂತಮ್ಮ ಸ್ಕೌಟ್ ಮಾಸ್ಟರುಗಳೊಂದಿಗೆ ಬಂದರು. ಸ್ಕೌಟು ಮಾಸ್ಟರುಗಳಾದ ಶ್ರೀ ಸಿ. ಎಂ. ಚಂದ್ರಶೇಖರ್, ಶ್ರೀ ಸಿ. ದೇವೇಗೌಡ, ಶ್ರೀ ಡಿ. ಎಲ್. ಯೋಗಪ್ಪ ಇವರು ಬಾಲಕ-ಬಾಲಕಿಯರು ಕಲಿತಿರುವ ವಿಷಯಗಳ ಸ್ಟ್ಯಾಂಡರ್ಡ್ ಜಡ್ಜಿಂಗ್ ನಡೆಸಿದರು.

ಸಂಜೆ ಚಿಕ್ಕಮಗಳೂರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಿ. ಅಶ್ವತ್ಥಯ್ಯನವರ ಅಧ್ಯಕ್ಷತೆಯಲ್ಲಿ ಮಕ್ಕಳ ಕಾರ್ಯಕ್ರಮ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಡಿ. ಎಚ್. ಮರಿಗೌಡರು ಸ್ವಾಗತ ಮಾಡಿದರು. ಕಾರ್ಯದರ್ಶಿಗಳಾದ ಕೆ. ಸಿ. ಲಿಂಗಪ್ಪನವರು ವರದಿಯನ್ನೋದಿದರು. ಸ್ಕೌಟ್ಸ್-ಗೈಡ್ಸ್‌ಗಳಿಂದ ಸ್ಕೌಟಿಂಗ್ ಕುರಿತಾದ ವಿಷಯಗಳ ತಿಳಿಸುವಿಕೆ ಆಸನಗಳು, ವಿವಿಧ ವಿನೋದಾವಳಿ ನಡೆಯಿತು.

ಶಾಲಾ ತನಿಖಾಧಿಕಾರಿಗಳಾದ ಶ್ರೀ ಡಿ. ಎ. ಈಶ್ವರೇಗೌಡರು ಭಾಗವಹಿಸಿದ ಶಾಲೆಗಳು—ಉಪಾಧ್ಯಾಯರು ಇವರಿಗೆ ಪ್ರಶಸ್ತಿ ಪತ್ರಗಳನ್ನೂ ಬಾಲಕ ಬಾಲಕಿಯರಿಗೆಲ್ಲಾ ಶ್ರೀ ಶಾರದಾ ಪಟಗಳನ್ನೂ ವಿನಿಯೋಗ ಮಾಡಿದರು.

ಶ್ರೀ ಅಣ್ಣಪ್ಪನವರು ಶಿಬಿರಾಗ್ನಿಯನ್ನು ಪ್ರಾರಂಭಿಸಿ ಹಿತೋಕ್ತಿಗಳನ್ನಿತ್ತರು.

ಶ್ರೀ ಸಿಂಗ್‌ರವರು ವಂದನಾರ್ಪಣೆ ಮಾಡಿದರು.

ಧಾರವಾಡ (ಗದಗ) ಜಿಲ್ಲೆಯ ಪ್ರಗತಿಯ ನೋಟ

ಕೇವಲ 6 ತಾಲೂಕುಗಳಿಂದ ಕೂಡಿದ ಜಿಲ್ಲೆ ಗದಗ ಜಿಲ್ಲೆ. ಇಲ್ಲಿಯ ವರೆಗೆ 250 ಜನ ಶಿಕ್ಷಕ-ಶಿಕ್ಷಕಿಯರಿಗೆ 9 ಶಿಬಿರಗಳನ್ನು ರೂಪಿಸಿ ಸ್ಕೌಟ್‌ಮಾಸ್ಟರ್, ಗೈಡ್‌ಕ್ಯಾಪ್ಟನ್ ತರಬೇತಿಯನ್ನು ಕೊಡಿಸಲಾಗಿದೆ. ಜಿಲ್ಲೆಯ ಆರು ತಾಲೂಕುಗಳಲ್ಲಿಯೂ ಸ್ಥಳೀಯಸಂಸ್ಥೆಗಳನ್ನು ರೂಪಿಸಲಾಗಿದೆ. 1960ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಜಾಂಬೂರಿಯಲ್ಲಿ ಭಾಗಿಯಾದ ನಂತರ ಇಲ್ಲಿಯವರೆಗೆ ಸಾಂಗವಾದ ರಾಜ್ಯದ ಯಾವತ್ತೂ ಸಮ್ಮೇಳನಗಳಲ್ಲಿ ಭಾಗವಹಿಸಲಾಗಿದೆ. ಸಿ. ಎ., ಸಿ. ಚಿತ್ರಗಳ ಪ್ರದರ್ಶನವನ್ನೂ ಕೂಡ ಏರ್ಪಡಿಸಲಾದುದುಂಟು. ಗದಗ ಜಿಲ್ಲೆಯಿಂದ 4 ಜಿಲ್ಲಾ ಮೇಳಗಳನ್ನು ರೂಪಿಸಲಾಗಿದೆ. ಒಂದು ಸಮ್ಮೇಳನದ ಮುಕ್ತಾಯ ಸಮಾರಂಭವನ್ನು ನಮ್ಮ ರಾಜ್ಯದ ಚೀಫ್ ಕಮೀಶನರಾಗಿರುವ ಪೂಜ್ಯರಾದ ಶ್ರೀ ಕೊಂಡಜ್ಜಿ ಬಸಪ್ಪನವರ ದಿವ್ಯ ನೇತೃತ್ವದಲ್ಲಿ ಸಾಂಗಗೊಳಿಸಲಾಯಿತು. ಮುಖ್ಯ ಅತಿಥಿವರ್ಯರಾಗಿ ಸನ್ಮಾನ್ಯ ಉಪರಾಷ್ಟ್ರಪತಿವರ್ಯರಾಗಿರುವ ಪರಮ ಪೂಜ್ಯ ಶ್ರೀ ಬಿ. ಡಿ. ಜತ್ತಿ ಅವರು ದಯಮಾಡಿಸಿದ್ದರು. ತಾಲೂಕಾ ಸಮ್ಮೇಳನವನ್ನು ಜರುಗಿಸಲಾಗಿದೆ. ಹೋದ ವರ್ಷ ಗದಗ ಜಿಲ್ಲೆಯಿಂದ 63 ಟ್ರುಪ್ಪುಗಳು ರಿಜಿಸ್ಟರ್ (ರಾಜ್ಯಸಂಸ್ಥೆಯಲ್ಲಿ) ಆದುದುಂಟು. 1977ರಲ್ಲಿ ರೂಪುಗೊಂಡಿದ್ದ ಜಿಲ್ಲಾಮೇಳದ ಕಾಲದಲ್ಲಿ "ಸ್ಮರಣಸಂಚಿಕೆ" ಯನ್ನು ಪ್ರಕಟಿಸಲಾಯಿತು, ಜಿಲ್ಲೆಯ ಸಲುವಾಗಿ ಕಟ್ಟಡದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಸಾಂಗವಾದ ರಾಜ್ಯಮಟ್ಟದ ಸಮ್ಮೇಳನದಲ್ಲಿ ಈ ಜಿಲ್ಲೆಯಿಂದ 175 ಸ್ಕೌಟ್-ಗೈಡ್ಸ್ ಹಾಗೂ ಸ್ಕೌಟರ್ ಗೈಡರರವರು ಭಾಗಿಯಾಗಿರುವರು. ಹಲವಾರು ಶ್ರಮದಾನಯಜ್ಞ, ಸಾಹಸದ, ಸಾಂಸ್ಕೃತಿಕ ಕಾರ್ಯಗಳನ್ನೂ ಸಾಂಗಗೊಳಿಸಲಾಗಿದೆ.

ಗದಗಿನ ಶ್ರೀ ಸಿ. ಎ. ಪಾಟೀಲರು ಉತ್ತಮ ಚಿತ್ರಕಲಾಕಾರರಾಗಿದ್ದು, 7ವರ್ಷ ಸ್ಕೌಟ್ ಆಗಿ, 27ವರ್ಷ ಸ್ಕೌಟ್ ಮಾಸ್ಟರ್ ಆಗಿ, 15ವರ್ಷ ಜಿಲ್ಲಾ ಕಾರ್ಯದರ್ಶಿಯಾಗಿ, 1 ವರ್ಷದಿಂದ ಎ. ಡಿ. ಸಿ. ಆಗಿ, ಸ್ಕೌಟ್ ಹಾಗು ಗೈಡ್ಸ್ ಆಂದೋಲನದ ಪ್ರಗತಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಸ್ಕೌಟ್-ಗೈಡ್ ಸಂಸ್ಥೆಯ ವತಿಯಿಂದ ಉಜಿರೆಯ ಡಿ. ಯಂ. ಪ್ರಾಥಮಿಕ ಶಾಲೆಯ ಆವರಣದಲ್ಲಿ ಜನವರಿ ದಿನಾಂಕ 27ರಿಂದ 30ರವರೆಗೆ ನಡೆದ ತಾಲೂಕು ಸ್ಕೌಟ್-ಗೈಡ್‌ರ್‍ಯಾಲಿಯ ಉದ್ಘಾಟನೆಯನ್ನು ಬೆಳ್ತಂಗಡಿಯ ನ್ಯಾಯಾಧೀಶ ಶ್ರೀ ಡಿ. ಎ. ಜವಳಿಯವರು ನೆರವೇರಿಸಿದರು. ರೋಟರಿ ಕ್ಲಬ್ ಅಧ್ಯಕ್ಷ ಶ್ರೀ ರವಿರಾಜ ಬಲ್ಲಾಳಗು ಅಧ್ಯಕ್ಷತೆ ವಹಿಸಿದ್ದರು. ರ್‍ಯಾಲಿಯ ನಿರ್ದೇಶಕ ಶ್ರೀ ಯಂ. ಗೋಪಾಲ ಕೃಷ್ಣರಾಯರು ರ್‍ಯಾಲಿಯ ಬಗ್ಗೆ ಪಕ್ಷಿನೋಟವಿತ್ತು ರ್‍ಯಾಲಿ ಗೀತೆಯನ್ನು ಪ್ರಚುರ ಪಡಿಸಿದರು, ಪ್ರಾರಂಭದಲ್ಲಿ ಸ್ಕೌಟ್ ಸಂಸ್ಥೆಯ ಅಧ್ಯಕ್ಷ ಶ್ರೀ ಬಿ. ನರಸಿಂಹ ಭಟ್ ಅವರು ಸ್ವಾಗತಿಸಿದ್ದು ಕೊನೆಯಲ್ಲಿ ಮುಖ್ಯೋಪಾಧ್ಯಾಯ ಶ್ರೀ ಕೆ. ಎ. ನಾರಾಯಣ ಅವರು ವಂದಿಸಿದರು.

28ರಂದು ರ್‍ಯಾಲಿಯಲ್ಲಿ ಏರ್ಪಡಿಸಲಾದ ಸ್ಕೌಟ್-ಗೈಡ್ ಕರಕುಶಲ ವಸ್ತು ಪ್ರದರ್ಶನವನ್ನು ಧರ್ಮಸ್ಥಳದ ಮಾತೃಶ್ರೀ ರತ್ನಮ್ಮ ಹೆಗ್ಗಡೆಯವರು ಉದ್ಘಾಟಿಸಿ ತಮ್ಮ ವತಿಯಿಂದ ಭಾರತ-ಭಾರತಿ ಪುಸ್ತಕ ಸಂಪಾದನ ವೀರ ಪುರುಷರ ಹೊತ್ತಗೆಗಳನ್ನು ಹಂಚಿದರು.

ರ್‍ಯಾಲಿಯಲ್ಲಿ ದಕ್ಷತೆಯ ಮತ್ತು ಪ್ರಾವೀಣ್ಯತೆಯ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಪಥಸಂಚಲನ : ಅಪರಾಹ್ನ ಉಜಿರೆಯ ಕಾಲೇಜಿನ ಪ್ರಾಂಶುಪಾಲ ಶ್ರೀ ಎಸ್. ಪ್ರಭಾಕರ್ ಅವರು ಸ್ಕೌಟ್-ಗೈಡ್‌ಗಳ ಪಥಸಂಚಲನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗ ವಹಿಸಿದ್ದರು.

ಸಮ್ಮೇಲನ : 29ರಂದು ನಡೆದ ಸ್ಕೌಟರ್-ಗೈಡರ್ ಸಮ್ಮೇಲನದ ಅಧ್ಯಕ್ಷತೆಯನ್ನು ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಆರ್.ಎನ್. ಭಿಡೆಯವರು ವಹಿಸಿದ್ದರು.

ಸಮಾರೋಪ : ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಡೆಯವರು ತಮ್ಮ ಸಂದೇಶದಲ್ಲಿ ಸಮಯದ ಬೆಲೆಯರಿತು ನಿಯಮಿತ ಕಾಲಕ್ಕೆ ನಿರ್ದಿಷ್ಟ ಕರ್ತವ್ಯ ಸಲ್ಲಿಸುವುದು, ಪರೋಪಕಾರದ ಅಭ್ಯಾಸ, ಸ್ವಾವಲಂಬನೆಯ ತತ್ವಾನಂಷ್ಠಾನ ಇತ್ಯಾದಿ ಪ್ರಮುಖ ವಿಷಯಗಳನ್ನು ಜೀವನದಾದ್ಯಂತ ಅನುಸರಿಸುವಂತಾಗಲು ಸ್ಕೌಟ್ ಚಳವಳಿಯು ಅತ್ಯಂತ ಅರ್ಹ ಚಟುವಟಿಕೆಯಾಗಿದೆ ಎಂದು ಹೇಳಿ ಶಿಬಿರಾರ್ಥಿಗಳನ್ನು ಅಭಿನಂದಿಸಿದರು.

ರ್‍ಯಾಲಿ ಸಮಾರೋಪದ ಶುಭಾಶಂಸನೆ ನೀಡುತ್ತಾ ಪುತ್ತೂರಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಶ್ರೀ ಅಜಯ್ ಕೆ. ಸಿಂಘ್ ಅವರು ತನ್ನ ಬಾಲ್ಯದ ಸ್ಕೌಟ್‌ದಿನಗಳನ್ನು ಸ್ಮರಿಸಿಕೊಂಡು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸ್ಕೌಟಿಂಗ್ ಪಾತ್ರ ಹಿರಿದಾದುದು ಎಂದು ಅಭಿಪ್ರಾಯಪಟ್ಟರು.

ರ್‍ಯಾಲಿಯ ಸಂಬಂಧ ಪ್ರಕಟಿಸಲಾದ ರ್‍ಯಾಲಿ ಸ್ಮರಣ ಸಂಚಿಕೆಯನ್ನು ಶ್ರೀ ಡಿ. ಸುರೇಂದ್ರಕುಮಾರ್ ಬಿಡುಗಡೆ ಗೊಳಿಸಿದರು.

ರಾತ್ರಿ ನಡೆದ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ಪುತ್ತೂರಿನ ಅಸಿಸ್ಟೆಂಟ್ ಕಮಿಷನರ್ ಶ್ರೀಮತಿ ತಾರಾ_ ಅಜಯ್‌ಸಿಂಘ್ ಉದ್ಘಾಟಿಸಿ ಮಕ್ಕಳನ್ನು ಹುರಿದುಂಬಿಸಿದರು.

ರ್‍ಯಾಲಿಯಲ್ಲಿ ಊಟೋಪಚಾರದ ವ್ಯವಸ್ಥೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಡೆಯವರು ಉಚಿತವಾಗಿ ನೀಡಿದ್ದರು. ರ್‍ಯಾಲಿಯಲ್ಲಿ ತಾಲೂಕಿನ 350 ಸ್ಕೌಟ್-ಗೈಡ್‌ಗಳು ಭಾಗವಹಿಸಿದ್ದರು.

ಮೈಸೂರು ನಗರದ ಶಾಲಾ ಅಧ್ಯಾಪಕರಿಗಾಗಿ ನಂಜನಗೂಡಿನ ಪ್ರವಾಸಿ ಮಂದಿರದಲ್ಲಿ ಮಾರ್ಚ್ 22 ರಿಂದ 29ವರೆಗೆ ಪರಿಚಯಾತ್ಮಕ ಹಾಗೂ ಪ್ರಾಥಮಿಕ ಕಬ್ ಮಾಸ್ಟರ್ಸ್ ಶಿಕ್ಷಣ ಶಿಬಿರವನ್ನು ಮಂಡ್ಯದ ಶ್ರೀ ಕೆ. ಕೃಷ್ಣಮೂರ್ತಿಯವರು ನಾಯಕರಾಗಿದ್ದು ನಡೆಸಿದರು.

ಸ್ಕೌಟ್ ಗೈಡ್ ರ್‍ಯಾಲಿ ಸಮಾರೋಪ ಸಮಾರಂಭ

ಬಂಟ್ವಾಳ ತಾಲೂಕಿನ ಸ್ಥಳೀಯ ಸ್ಕೌಟ್ ಮತ್ತು ಗೈಡ್ ಸಂಸ್ಥೆಯ ಆಶ್ರಯದಲ್ಲಿ ಪಾಣೆಮಂಗಳೂರಿನ ಶಾರದಾ ಹೈಸ್ಕೂಲಿನ ಆವರಣದಲ್ಲಿ ಇತ್ತೀಚೆಗೆ ನಡೆದ ತಾಲೂಕು ಮಟ್ಟದ ಸ್ಕೌಟ್ - ಗೈಡ್ ರ್‍ಯಾಲಿಯ ಉದ್ಘಾಟನೆಯನ್ನು ಪಾಣೆಮಂಗಳೂರಿನ ಲಯನ್ಸ್ ಕ್ಲಬ್ ಅಧ್ಯಕ್ಷ ಶ್ರೀ ಬಿ. ಲಕ್ಷ್ಮಿನಾರಾಯಣ ಪ್ರಭು ಅವರು ನಡೆಸಿದರು.

ಸಭೆಯ ಅಧ್ಯಕ್ಷತೆಯನ್ನು ಶಾರದಾ ಹೈಸ್ಕೂಲಿನ ಆಡಳಿತ ವ್ಯವಸ್ಥಾಪಕರಾದ ಶ್ರೀ ಯನ್. ಕೇಶವ ಕುಡ್ವರು ವಹಿಸಿದ್ದರು. ನಾರಾಯಣ ಬನ್ನಿಂತಾಯರು ಸ್ವಾಗತಿಸಿದರು. ರ್‍ಯಾಲಿಯ ನಿರ್ದೇಶಕ - ಶ್ರೀ ಯಂ. ಗೋಪಾಲ ಕೃಷ್ಣ ರಾಯರು ರ್‍ಯಾಲಿಯ ಕಾರ್ಯಕ್ರಮಗಳ ವಿವರ ನೀಡಿದರು. ಕೊನೆಯಲ್ಲಿ ಸಹ ಜಿಲ್ಲಾ ಕಮಿಷನರ್ ಶ್ರೀ ನಾರಾಯಣ ರಾಯರು ಧನ್ಯವಾದಾರ್ಪಿಸಿದರು.

ವಸ್ತು ಪ್ರದರ್ಶನ

ವಸ್ತು ಪ್ರದರ್ಶನ ಬಂಟ್ವಾಳ ನಗರ ಸಭೆಯ ಅಧ್ಯಕ್ಷ ಶ್ರೀ ಎಸ್. ವಿಠಲ್ ರಾವ್ ಅವರು ಸ್ಕೌಟ್-ಗೈಡ್ ವಸ್ತು ಪ್ರದರ್ಶನ ಉದ್ಘಾಟನೆ ನಡೆಸಿದರು. ಅಂದು ರಾತ್ರೆ ನಡೆದ ಶಿಬಿರಾಗ್ನಿಯನ್ನು ಮುಖ್ಯೋಪಾಧ್ಯಾಯ ಶ್ರೀ ಅಣ್ಣೆ ಭಟ್ ಅವರು ಉದ್ಘಾಟಿಸಿದರು.

ಮಕ್ಕಳ ಮೇಳ

ದಿನಾಂಕ 5 ರಂದು ಅಪರಾಹ್ನ ನಡೆದ ಕಬ್ ಮತ್ತು ಬುಲ್ ಬುಲ್ ಮೇಳದಲ್ಲಿ ಸ್ಥಳೀಯ ಲಯನ್ಸ್ ಕ್ಲಬ್ ಉಪಾಧ್ಯಕ್ಷ ಶ್ರೀ ಬಿ. ಕೃಷ್ಣ ಶೆಣೈ ಅವರು ಮುಖ್ಯ ಅತಿಥಿಗಳಾಗಿದ್ದರು.

ರ್‍ಯಾಲಿಯಲ್ಲಿ ವರ್ಣರಂಜಿತ ದಕ್ಷತೆಯ ಸ್ಪರ್ಧೆಗಳು ಪ್ರಾವೀಣ್ಯತೆಯ ಸ್ಪರ್ಧೆಗಳು, ರ್‍ಯಾಲಿ, ಮೇಳ ನಗರ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳು ಜರುಗಿದವು,

ಸಮಾರೋಪ ಸಮಾರಂಭ

ರ್‍ಯಾಲಿ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಬಂಟ್ವಾಳದ ಮುನ್ಸಿಫ್ ಶ್ರೀ ಫಾಲನೇತ್ರ ಅವರು ತಮ್ಮ ಸಂದೇಶ ನೀಡಿ ಮಕ್ಕಳ ಉತ್ಸಾಹ ಮತ್ತು ಶಿಸ್ತು ಬದ್ಧ ನಡವಳಿಕೆಯನ್ನು ಅಭಿನಂದಿಸಿದರು.

ಸಮಾರೋಪ ಶುಭಾಶಂಸನೆ ನೀಡಿದ ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಮೋಹನರಾವ್ ಅವರು ಮಕ್ಕಳ ಸುಪ್ತ ಚೇತನದ ವಿಕಾಸಕ್ಕೆ ಹಾಗೂ ಮಾತ್ರ ಭೂಮಿಯ ಸೇವಾ ಮನೋಭಾವದ ರೂಢಿಗೆ ಇಂತಹ ರ್‍ಯಾಲಿಗಳು ಪೂರಕವಾಗಿದೆ ಎಂದು ಕರೆ ನೀಡಿದರು. ಅಧ್ಯಕ್ಷರು ಮತ್ತು ಶ್ರೀಮತಿ ಫಾಲನೇತ್ರ ಅವರು ಸ್ಕೌಟ್ ಗೈಡ್‌ಗಳಿಗೆ ಪ್ರಶಸ್ತಿ ಪತ್ರಗಳ ವಿತರಣೆ ಮಾಡಿದರು. ಸಂಸ್ಥೆಯ ಕಾರ್ಯದರ್ಶಿ ಶ್ರೀ ಪಿ. ಅನಂತ ರಾಮಯ್ಯ ಅವರು ದುಡಿದವರಿಗೆಲ್ಲ ಕೃತಜ್ಞತೆ ಸಲ್ಲಿಸಿದರು.

ರಾತ್ರಿ ನಡೆದ ಭವ್ಯ ಶಿಬಿರಾಗ್ನಿಯನ್ನು ಸ್ಥಳೀಯ ಶ್ರೀ ವೀರ ವಿಠಲ ದೇವದಳ ಆಡಳಿತ ನಿರ್ಮಾಪಕರಾದ ಶ್ರೀ ಪಿ. ಎನ್. ಭಂಡಾರ್‌ಕಾರ್ ಉದ್ಘಾಟಿಸಿದರು.

ಈ ರ್‍ಯಾಲಿಯಲ್ಲಿ ಬಂಟ್ವಾಳ ತಾಲೂಕಿನ 325 ಸ್ಕೌಟ್, ಗೈಡುಗಳು ಭಾಗವಹಿಸಿದ್ದರು.

ಬೇಡೆನ್ ಪೊವೆಲ್ಲರ ಜನ್ಮದಿನಾಚರಣೆ

ಲಕ್ಯಾಗ್ರಾಮದಲ್ಲಿ ಶಾಲಾಮುಖ್ಯೋಪಾಧ್ಯಾಯರಾದ ಶ್ರೀ ಪಿ. ನಂಜುಡಪ್ಪನವರ ಅಧ್ಯಕ್ಷತೆಯಲ್ಲಿ 22-2-78ರಂದು ಬಿ. ಪಿ. ಜನ್ಮದಿನಾಚರಣೆ ನಡೆಯಿತು.

ಲಕ್ಯಾ-ದೇವರಹಳ್ಳಿ ಶಾಲೆಗಳ ಕಬ್ಸ್–ಸ್ಕೌಟ್ಸ್ ಮತ್ತು ಗೈಡ್ಸ್ ಭಾಗವಹಿಸಿದ್ದರು.

ಸ್ಕೌಟ್ ಡಿ. ಬಸವರಾಜು, ಬಿ. ಮರಿರಂಗಪ್ಪ ಇವರು ಬಿ. ಪಿ. ರವರ ಜೀವನ ಚರಿತ್ರೆಯನ್ನು ತಿಳಿಸಿದರು. ಎನ್.ಪ್ರತಾಪ್, ಡಿ. ಎಮ್. ಜನಾರ್ಧನ ಇವರು ಲಾವಣಿ ರೂಪದಲ್ಲಿ ಬಿ. ಪಿ. ರವರ ಚರಿತ್ರೆಯನ್ನು ಹಾಡಿದರು.

ಗೈಡ್ಸ್‌ಗಳಾದ ಪುಷ್ಪ-ಡಿ. ಪಿ. ರತ್ನಮ್ಮ ಇವರು ದಿ॥ ಲೇಡಿ ಓಲೇವ್‌ರವರ ವಿಚಾರ ಮಾತಾಡಿದರು.

ಸ್ಥಳೀಯ ಸ್ಕೌಟ್ ಸಂಘಕ್ಕೆ ಶ್ರೀಯುತರಾದ ಡಿ. ಎಚ್. ಮರಿಗೌಡರು, ಡಿ. ಜೆ. ಚನ್ನೇಗೌಡರು, ಎಲ್. ಎಂ. ಜಗನ್ನಾಥಪ್ಪನವರು, ಎಮ್. ದೊಡ್ಡನಿಂಗೇಗೌಡರು ತಲಾ ರೂ. 101/- ಸಹಾಯಧನ ನೀಡಿ ಅಜೀವ ಸದಸ್ಯರಾದರು.

ಶ್ರೀ ಎ. ಜಿ. ಬಲರಾಂಸಿಂಗ್‌ರವರು ದಾನಿಗಳಿಗೆ ಸಂಘದ ಪರವಾಗಿ ಕೃತಜ್ಞತೆಗಳನ್ನರ್ಪಿಸಿದರು.

ಮಕ್ಕಳ ಕಥೆ

ಸ್ವಾರ್ಥಿ ಉಲ್ಲಾಸ್!

ಲೇಖಕಿ : ಜಯಲಕ್ಷ್ಮೀ ಶ್ರೀನಿವಾಸನ್,
ಬೆಂಗಳೂರು-27

ಸಂಜೆ ನಾಲ್ಕು ಘಂಟೆಯ ಸಮಯ. ಝಣ ಝಣ ವೆಂದು ಬೆಂಗಳೂರಿನ ಬಸವನಗುಡಿ ಬಡಾವಣೆಯ ಹಿರಿಯ ಪ್ರಾಥಮಿಕ ಪಾಠಶಾಲೆಯ ಘಂಟೆ ಬಾರಿಸಿತು. ಮಕ್ಕಳೆಲ್ಲರೂ ಜೇನುಗೂಡಿನಿಂದ ಹೊರಟ ಜೇನು ಹುಳುಗಳಂತೆ ಹೊರಬಂದು ಕೋಲಾಹಲದಿಂದ ಇಂಪುಧ್ವನಿಗೂಡಿಸುತ್ತ ತಂತಮ್ಮ ಮನೆಗಳಿಗೆ ಹೊರಟರು.

"ಇಗೋ ಬೇಸಿಗೆಯ ರಜ ಪ್ರಾರಂಭ. ಸ್ಕೂಲು, ಓದು, ಪಾಠ, ಪರೀಕ್ಷೆ...ಈ ಎಲ್ಲ ಕಾಟಗಳೂ ಸದ್ಯಕ್ಕೆ ತೊಲಗಿತಪ್ಪ, ಎರಡು ತಿಂಗಳು ಹಾಯಾಗಿ ಇಷ್ಟ ಬಂದಂತೆ ಆಟವಾಡುತ್ತಿರಬಹುದು..." ಎಂದು ಸವಿಗನಸು ಕಾಣುತ್ತ ಉಲ್ಲಾಸ್ ತನ್ನ ಮನೆಯನ್ನು ತಲುಪಿದನು,

ಬೀದಿಯಬಾಗಿಲಲ್ಲೇ ಅವನಿಗಾಗಿ ಕಾದು ನಿಂತಿದ್ದ ಅವನ ಅಮ್ಮ ಜಾನಕಿ ಮಾಮಿ "ಇನ್ನೇನು ನಾಳೆಯಿಂದ ನಿನಗೆ ರಜ, ಒಳ್ಳೇ ಮಜಾ ಉಲ್ಲಾಸ್; ಈ ಹೊತ್ತು ಒಂದು ಸ್ಪೆಷಲ್ ತಿಂಡಿ ಮಾಡಿದ್ದೇನೆ. ಊಹಿಸು" ಎಂದು ಒಂದು ಒಗಟೆ ಹಾಕಿದಳು.

ಉಲ್ಲಾಸ್ "ಅದೇನಮ್ಮ ನೀನೇ ಹೇಳಿಬಿಡಮ್ಮ"

ಜಾನಕಿ "ನಿನಗೆ ಬಹಳ ಇಷ್ಟವಾದುದು !"

ಉಲ್ಲಾಸ್ "ಜಾಂಗೀರಿ; ಹೂಂ, ಚಿರೋಟಿ; ಇಲ್ಲ, ಮತ್ತೆ ಲಾಡು..."

ತಾಯಿ "ಇಲ್ಲವೋ ದಡ್ಡ ! ಉದ್ದಕ್ಕೆ ಹೇಳುತ್ತ ಹೋಗುತ್ತಿರು !"

ಉಲ್ಲಾಸ್ "ಮತ್ತೆ, ಮತ್ತೆ, ಜಾಮೂನ್"

ತಾಯಿ "ಹಾಂ...ಅದೇ ಮತ್ತೆ ಪುಸ್ತಕ ಚೀಲ ಅಲ್ಲಿಟ್ಟು, ಕೈ ಕಾಲುತೊಳೆದು ಬಾ, ಬೇಗ"

x x x x

ಉಲ್ಲಾಸ್ ಕೈಕಾಲು ತೊಳೆದುಕೊಂಡು ಉಲ್ಲಾಸವಾಗಿ ಕುಣಿಯುತ್ತ ಊಟದ ಮನೆಯೊಳಗೆ ನುಗ್ಗಿದನು.

ಆಗ ತಾನೇ ತಯಾರಾಗಿ ತೆಗೆದಿಟ್ಟಿದ್ದ ತಿಂಡೀ ತಟ್ಟೆಯನ್ನು ಜಾನಕಿ ಮಾಮೀ ಮಗನ ಕೈಗಿತ್ತು "ಕೋ, ಸಾಕೇ? ನಾಲ್ಕು ಜಾಮೂನುಗಳಿವೆ. ಜೊತೆಗೆ ಇಷ್ಟು ಉಪ್ಪಿಟ್ಟೂ ತಿನ್ನು, ಬೆಳಿಗ್ಗೆ ಮಾಡಿದ್ದು ಇಷ್ಟಿದೆ. ಬೆಳಿಗ್ಗೆ ಅಪ್ಪಾವರು ಬೊಂಬಾಯಿಗೆ ಹೊರಟು ಹೋದರು. ಇನ್ನು, ಅವರು ಹಿಂತಿರುಗಿ ಬರುವ ವರೆವಿಗೂ ನಾನೊಬ್ಬಳೇ ಎಲ್ಲ ಕೆಲಸ ನಿರ್ವಹಿಸಬೇಕು."

ಉಲ್ಲಾಸ್ "ಅಮ್ಮಾ, ಜಾಮೂನ್ ಬಲುರುಚಿಯಾಗಿದೆ. ಇನ್ನು ನಾಲ್ಕು ಬಡಿಸಮ್ಮಾ."

ತಾಯಿ "ಸಾಕಪ್ಪ, ನಾಳೆಗೆ ಸ್ವಲ್ಪ ಇರಲಿ" ಎನ್ನುತ್ತ ಇನ್ನೆರಡು ಮಾತ್ರ ಬಡಿಸಿದಳು.

ಉಲ್ಲಾಸ್ "ಅಪ್ಪಾ ಕ್ಯಾಂಪ್‌ನಿಂದ ಎಂದು ಬರುತ್ತಾರೆ ? "

ತಾಯಿ "ಹದಿನೈದು ದಿನಗಳಾಗಬಹುದು. ಅಷ್ಟರವರೆಗೆ ನೀನು ಸ್ವಲ್ಪ ನನಗೆ ನೆರವಾಗಿರಬೇಕು. ನಿನಗೀಗ ರಜವಲ್ಲವೇ. ಜಾಣಾಮರಿ ನೀನು" ಎಂದು ಮಗನ ಕೆನ್ನೆಗೊಂದು ಮುತ್ತು ಕೊಟ್ಟು ಹುರಿದುಂಬಿಸಿದಳು. ಆದರೆ...ಆದರೆ, ಆಗ ಉಲ್ಲಾಸನ ಮುಖ ನೋಡಬೇಕಾಗಿತ್ತು ! ಮುಖ ಸಿಂಡರಿಸಿಕೊಂಡು "ಊಹೂಂ...ನನ್ನ ಕೈಲಾಗೋಲ್ಲ. ನನಗೆಷ್ಟೋ ಕೆಲಸ ಇವೆ. ರಜದಲ್ಲಿ ಬಗೆಬಗೆಯ ಆಟಗಳನ್ನಾಡಲು ದೊಡ್ಡದೊಂದು 'ಪ್ರೋಗ್ರಾಂ' ಹಾಕಿಟ್ಟಿದ್ದೇನೆ" ಎಂದಂದು ಕುಳಿತಲ್ಲಿಂದ ಎದ್ದುಬಿಟ್ಟನು.

ತಾಯಿ "ಏನೋ ಅಂತಹ ಮಹಾ ಮುಖ್ಯವಾದ ಕೆಲಸ ನಿನ್ನದು ? ನಿನ್ನ ಪಾಲಿಗೆ ಆಟವಾಡುವುದೊಂದೇ ಮುಖ್ಯವೇ ? ತಿನ್ನೋ ಉಪ್ಪಿಟ್ಟನ್ನು, ಬೀಸಾಡಿದರೆ ಜೋಕೆ ! ನಮ್ಮ ನಾಡಲ್ಲಿ ಒಪ್ಪೊತ್ತು ಊಟಕ್ಕೂ ಗತಿ ಇಲ್ಲದೆ ಎಷ್ಟು ಮಂದಿ ಸಂಕಟ ಪಡುತ್ತಾರೆ. ನಿನ್ನ ಗರ್ವ ವಂತೂ ಮಿತಿಮೀರಿತು" ಎಂದು ರೇಗಾಡುತ್ತ ಅವನನ್ನು ಎಳೆತಂದು ಕುಕ್ಕರಿಸಿದಳು.

ಉಲ್ಲಾಸ್ "ಸಾಕಮ್ಮ, ನಿನ್ನ ಒರಟು ಉಪನ್ಯಾಸ ಕೇಳಿ ಕೇಳಿ ಸಾಕಾಯಿತು. ಬೇಗನೆ ಕಾಫಿ ಕೊಡು. ನಾನೀಗ ಆಟಕ್ಕೆ ಹೋಗಬೇಕು".

ಜಾನಕಿ ಮಾಮಿಗೆ ಬಹಳ ರೇಗಿತು. ತನ್ನ ಮಗನ ಇಂತಹ ವರ್ತನೆಯನ್ನು ಕಂಡು ನೊಂದುಕೊಳ್ಳುತ್ತ ಕಾಫಿ ಬೆರಸಿ ತಂದುಕೊಟ್ಟಳು. ಉಲ್ಲಾಸ್ ಅದನ್ನು ಗಳಗಳನೆ ಕುಡಿದು ಲೋಟಯನ್ನು ಸಹ ತೊಳೆಯದೆ ಕೆಳಗಿಟ್ಟು, ಆಟವಾಡಲು ಹೊರಟು ಹೋದನು.

ತಾಯಿ "ನನಗಿರುವುದು ಇದೊಂದೇ ಮಗು. ಭಗವಂತಾ ಇವನಿಗೆ ಒಳ್ಳೆಯ ಬುದ್ಧಿ ಕರುಣಿಸಪ್ಪಾ. ನಾವೆಷ್ಟೇ ಕಲಿಸಿದರೂ ಅವನು ಈ ರೀತಿ ಹಠಮಾರಿಯಾಗಿ, ಸೋಮಾರಿಯಾಗಿ ಬೆಳೆಯುತ್ತಿದ್ದಾನೆ. ಇವನಿಗೆ ಬಡವ ರಲ್ಲಿ, ವಯೋಧಿಕರಲ್ಲಿ, ಖಾಯಿಲೆಯವರಲ್ಲಿ....ಕೊನೆಯ ಪಕ್ಷ ಹೆತ್ತು, ಸಾಕಿ-ಸಲಹಿದ ತಾಯಿ ತಂದೆಯರಲ್ಲೂ ಕನಿಕರವಿಲ್ಲ. ಪರೋಪಕಾರ ಬುದ್ಧಿಯಂತೂ ಎಳ್ಳಷ್ಟೂ ಇಲ್ಲ. ಮಹಾಸ್ವಾರ್ಥಿ.

"ಇವನ ತಂದೆಗೆ ಮಗನಿಗೆ ಕೊಂಚ ಬುದ್ಧಿ ಕಲಿಸಿ" ಎಂದರೆ, "ಎಲ್ಲ ಬೆಳೆಯುತ್ತ ಬೆಳೆಯುತ್ತ ತಿದ್ದಿಕೊಳ್ಳು ತ್ತಾನೆ. ಈಗ ಎಳೇಪ್ರಾಯ..."ಎಂದು ಬಿಡುತ್ತಾರೆ. ಅವರಿಗೆ ಆಫೀಸಿನ ಕಾರ್ಯ ಬಹಳ. ಇವನನ್ನು ಕಟ್ಟಿ ಕೊಂಡು ಪೇಚಾಡಲು ಸಮಯವೆಲ್ಲಿ ? ಸ್ಕೌಟ್ ತರಗತಿ ಗೂ ಸೇರಿಸಿ ನೋಡಿದುದಾಯಿತು. ಅಲ್ಲಿಗೂ ಸರಿಯಾಗಿ ಹೋಗೊಲ್ಲ" ಎಂದು ಪೇಚಾಡಿಕೊಂಡರು.

x x x x

ಮರುದಿನ ಬೆಳಿಗ್ಗೆ, ಯಾಕೋ ವರ್ತನೆಯಾಗಿ ಬರುತ್ತಿದ್ದ ಹಾಲಿನವನು ಚಕ್ಕರ್. ಹಿಂದಿನ ರಾತ್ರೆ ಹೆಪ್ಪು ಹಾಕಿ ಮಿಕ್ಕಿದ್ದ ಹಾಲಲ್ಲೇ ಜಾನಕಿ ಮಾಮಿ ತನಗೂ, ಉಲ್ಲಾಸನಿಗೂ ಕಾಫೀ ಬೆರೆಸಿ ಸರಿಗಟ್ಟಿದಳು, ಆದರೆ, ಈಗ ಒಂದು ಶೀಶೆಯಾದರೂ ಹಾಲು ಬೇಕೇ ಬೇಕು, ಕೈಯಲ್ಲಿ ರೂಪಾಯಿ ನೋಟನ್ನೂ, ಶೀಶೆಯನ್ನೂ ಹಿಡಿದು "ಉಲ್ಲಾಸ್, ಉಲ್ಲಾಸ್" ಎಂದು ಕರೆದಳು. ಜವಾಬಿಲ್ಲ. ಮನೆಯೆಲ್ಲಾ ಹುಡುಕಿದಳು. ಕಾಣಿಸಲಿಲ್ಲ. ಕೊನೆಗೆ 'ಉಲ್ಲಾಸ್, ಉಲ್ಲಾಸ್' ಎಂದು ಕೂಗುತ್ತಾ ಅಂಗಳದತ್ತ ಬಂದಳು. ಬಾಳೆಯ ಗಿಡಗಳ ಮರೆಯಲ್ಲಿ ಗೊಂಬೆತುಪಾಕಿ (Toy gun) ಹಿಡಿದು ಉಲ್ಲಾಸ್ ಬೇಟೆಯಾಡುತ್ತಿರು ವುದು ತೋರಿತು. ಅಲ್ಲಿದ್ದ ಅಳಿಲುಗಳೇ ಅವನಿಗೆ ಸಿಂಹ, ಹುಲಿ, ಚಿರತೆ....ಎಲ್ಲ ! ಅವನ ಆಟದ ಭರದಲ್ಲಿ ಅಮ್ಮ ಕರೆದರೆ ಬರುತ್ತಾನೆಯೇ ? ಆಕೆಯ ಕರೆ ಕೇಳಿಸಿದರೂ ಅಲಕ್ಷ್ಯ ಮಾಡಿದನು. ಆಕೆಯ ಕೈಯಲ್ಲಿದ್ದ ಖಾಲೀ ಹಾಲಿನ ಶೀಶೆ ಕಂಡಾಕ್ಷಣ "ಹೂಂ, ಈ ಸ್ವಾರಸ್ಯದ ಆಟ ಬಿಟ್ಟು, ಈಗ ಯಾರು ಹಾಲಿನ ಬೂತಿಗೆ ಹೋಗುವರು?" ಎಂದು, ತನ್ನಷ್ಟಕ್ಕೆ ಷೋಕಾಗೆ ಆಡುತ್ತಿದ್ದನು.

ಪಕ್ಕದ ಮನೆಯ ಪಂಕಜಮ್ಮನ ಮಗ ರವಿ ಕಿಟಿಕಿಯ ಬಳಿ ಏನನ್ನೋ ಓದುತ್ತಾ ಕುಳಿತ್ತಿದ್ದವನು ಹೊರಬಂದು ಇವರ ಮನೆಯ ಕಂಪೌಂಡು ಹತ್ತಿರ ನಿಂತನು.

ರವಿ "ಮಾಮೀ, ನಾನು ಬರಲೇ ? ಏನು ಬೇಕಿತ್ತು ? "

ಮಾಮಿ "ಬೆಳಿಗ್ಗೆ ಹಾಲಿನವನು ಬರಲಿಲ್ಲ. ಒಂದು ಸೀಸೆ ಹಾಲು ಬೇಕಿತ್ತು. 'ಬೂತ್' (Milk Booth) ಗೆ ಕಳುಹಲು ಉಲ್ಲಾಸನನ್ನು ಕರೆದೆ. ಮನೆಯಲ್ಲಿ ಎಲ್ಲೂ ಕಾಣಿಸಲಿಲ್ಲ (ಮಾಮಿ ಉಲ್ಲಾಸನನ್ನು ಬಾಳೆಯ ಗಿಡಗಳ ಗುಂಪಿನ ಮರೆಯಲ್ಲಿ ಕಂಡರೂ ಕಾಣದವಳಂತೆ ನುಡಿದಳು!)

ರವಿ "ನಾನು ಕೊಂಡು ತರುತ್ತೇನೆ. ಇಲ್ಲಿ ಕೊಡಿ ಶೀಶೆ; ನನಗೂ ಮನೆಯಲ್ಲಿ ಬೇಜಾರು" ಎಂದು ಜಾನಕಮ್ಮನ ಮನೆಗೆ ಓಡಿ ಬಂದು, ಖಾಲೀ ಶೀಶೆಯನ್ನೂ, ರೂಪಾಯಿ ಯನ್ನೂ ತೆಗೆದುಕೊಂಡು ಹೋದನು. ಹತ್ತೇ ನಿಮಿಷಗಳಲ್ಲಿ ಹಾಲನ್ನು ಕೊಂಡುತಂದು ಮಾಮಿಯ ಕೈಗೆ ಕೊಟ್ಟು ಹೊರಟುಹೋದನು.

ಆ ಸಂಜೆ, ರೊಟ್ಟೀ ಅಂಗಡಿಯಿಂದ ಒಂದು ರೊಟ್ಟಿ ತರಬೇಕಿತ್ತು, ಜಾನಕಮ್ಮ "ಉಲ್ಲಾಸ್ ಉಲ್ಲಾಸ್" ಎಂದು ಕಿರಿಚಿಕೊಂಡರು. ಅವನೆಲ್ಲಿ ಬರು ತ್ತಾನೆ ? ತಾನಾಗಿಯೇ ಯಾವಾಗಲೂ ಅಮ್ಮನ ಕರೆಗೆ 'ಓಗೊಡದೆ' ತಲೆತಪ್ಪಿಸಿಕೊಂಡು ತಿರುಗುತ್ತಿರುವನಲ್ಲಾ ! ಅಮ್ಮನಿಗೆ ಕಾಣಿಸದಂತೆ ಉಲ್ಲಾಸ್ ಮಹಡಿಯಲ್ಲಿ ಹೋಗಿ ಕುಳಿತಿದ್ದನು. ಗೋಂದು ಶೀಶೆ, ಕಾಗದ, ದಾರ, ಕತ್ತರಿ

ಎಲ್ಲವನ್ನೂ ಹರವಿಕೊಂಡು, ಗಾಳೀಪಠ ಮಾಡುತ್ತಿದ್ದನು. ಅಮ್ಮನ ಕರೆ ಕೇಳಿಬಂದರೂ ಧ್ವನಿಕೊಡಲಿಲ್ಲ. ಅಮ್ಮನಿಗೇ ನಂತೆ ಕೆಲಸ. "ಅಂಗಡಿಗೆ ಹೋಗಿ ತರಕಾರೀ ಕೊಂಡು ತಾ", "ಲಾಂಡ್ರೀಯಿಂದ ಬಟ್ಟೆ ತಾ", "ಇಂಗು ಮುಗಿದು ಹೋಗಿದೆ. ಮಲ್ಲಪ್ಪಶೆಟ್ರ ಅಂಗಡಿಯಲ್ಲೇ ಒಳ್ಳೇ ಇಂಗಿದೆ, ಕೊಂಡು ಬಾ" ಎಂದು ಕೆಲಸ ಹೇಳುತ್ತಲೇ ಇರುತ್ತಾಳೆ, ನಾನಂತೂ ಹೋಗೋಲ್ಲ ಗಂಟಲು ನೋಯುವಷ್ಟು ಕಿರಿಚಿ ಕೊಳ್ಳಲೇನೀಗ!'' ಎಂದು ಉಲ್ಲಾಸ್ ಮೌನವಾಗಿಯೇ ಕುಳಿತಿದ್ದನು.

ಸರಿ, ಜಾನಕಿಯ ಕರೆ ಕೇಳಿಸಿಕೊಂಡ ನೆರೆಮನೆಯ ರವಿ ಓಡಿ ಬಂದನು. ರವಿ ''ಮಾಮೀ ಏನು ಬೇಕು ಉಲ್ಲಾಸನನ್ನು ಕಾಣಲಿಲ್ಲವೇ? ಅವನೆಲ್ಲಾದರೂ ಹೋಗಿರ ಬೇಕು. ನಿಮಗೇನಾದರೂ ಬೇಕಾದರೆ ಸಂಕೋಚವಿಲ್ಲದೆ ನನ್ನನ್ನು ಕೂಗಿ, ನಾನು ನೆರವಾಗುತ್ತೇನೆ. ನಾನಂತೂ ಎಲ್ಲೂ ಹೋಗೋಲ್ಲ ಮನೆಯಲ್ಲೇ ಇರುತ್ತೇನೆ. ಅಪ್ಪಾ-ಅಮ್ಮಾ ತುಮಕೂರಿಗೆ ಹೋಗಿದ್ದಾರೆ. ನಮ್ಮಜ್ಜ ಮಾತ್ರ ಮನೆಯಲ್ಲಿದ್ದಾರೆ. ಅವರಿಬ್ಬರೂ ಹಿಂದಿರುಗಿ ಬರುವ ವರೆವಿಗೆ ಸಾಧ್ಯವಾದಷ್ಟು ಹೊತ್ತು ಅಜ್ಜನ ಬಳಿಯಲ್ಲೇ ಕುಳಿತು ಏನಾದರೂ ಓದುತ್ತಿರುತ್ತೇನೆ. ಎಂದು ಭವ್ಯ ವಾಗಿ ಅಂದನು.

ಜಾನಕಿ "ಪಾಪ, ನೀನೆಷ್ಟು ಒಳ್ಳೆಯ ಹುಡುಗ, ಕೋ ಒಂದು ರೂಪಾಯಿ, ಹತ್ತು ಪೈಸೇ ಒಂದು ಲೋಫ್ ಬ್ರೆಡ್ ಬೇಕಿತ್ತು" ಎಂದಂದು ರವಿಯ ಕೈಗೆ ದುಡ್ಡನ್ನು ಕೊಟ್ಟಳು. ಆ ಕೂಡಲೇ ರವಿ ಅಂಗಡಿಗೆ ಹೋಗಿ ರೊಟ್ಟಿ ಕೊಂಡು ತಂದು ಕೊಟ್ಟು, ತನ್ನ ಮನೆಗೆ ಹೊರಟು ಹೋದನು.

ಜಾನಕಿ "ಅಬ್ಬಾ, ಇವನೆಷ್ಟು ಒಳ್ಳೆಯ ಹುಡುಗ, ಮನೆಯಲ್ಲೇ ಅಡಿಗೆಯವನಿದ್ದರೂ ಅಜ್ಜನನ್ನು ಅರ್ಧ ಘಳಿಗೆ ಬಿಡದೆ ಜೋಪಾನವಾಗಿ ನೋಡಿಕೊಳ್ಳುತ್ತಾನೆ. ತೋಟಕ್ಕೆ ನೀರು ಬಿಡುವಾಗಲೂ, ಬೀದಿಯ ಬಾಗಿಲ ಮುಂದೆ ಅಜ್ಜನನ್ನು ಕರೆತಂದು ಕುರ್ಚಿಯಲ್ಲಿ ಕುಳ್ಳಿರಿಸಿದ ಬಳಿಕವೇ ಕೆಲಸಕ್ಕೆ ತೊಡಗುತ್ತಾನೆ. ನಡುನಡುವೆ ನನಗೂ ನೆರವಾಗುತ್ತಾನೆ. ನಮ್ಮ ಉಲ್ಲಾಸನೂ ಇವ ನಿಗೆ ಸಮ ವಯಸ್ಸಿನವನು. ಕೊಂಚವೂ ಜವಾಬ್ದಾರಿ ಹೊತ್ತಿಲ್ಲ. ಹಠಮಾಳ, ಸ್ವಾರ್ಥಿ. ಯಾವಾಗ ನನ್ನ ಮಗನಿಗೆ ವಿವೇಕ ಕಲಿಸುತ್ತೀಯೋ ದೇವರೇ!" ಎಂದು ಚಿಂತಿಸುತ್ತಾ ಒಳಗೆ ಹೋದರು.

(ಮುಂದುವರಿಯುವುದು)

ಕೆಲವು ಹಿತನುಡಿಗಳು

1. ಬೆಳಕು ಬಂದರೆ ಸಿನೀಮಾ ಪಠ ಕಾಣದು.
   ಜ್ಞಾನೋದಯ ಆದರೆ ಲೋಕದ ಬಂಧ ಕಾಣದು.
2. ಟೆಲಿಸ್ಕೋಪ್ ಮೂಲಕ ನಕ್ಷತ್ರಗಳನ್ನು ಕಾಣಬಹುದು.
   ಜ್ಞಾನದಮೂಲಕ ದೇವರನ್ನು ಕಾಣಬಹುದು.
3. ಹುಂಡಿಯಲ್ಲಿ ದುಡ್ಡು ಹಾಕಿ, ಹುಂಡಿ ಎಂಬುದು ಬಡವನ ಹೊಟ್ಟೆ,
4. ತಿಳುವಳಿಕೆ ಅರಳಲಿ, ದುರಾಸೆ ತೊಲಗಲಿ.
5. ಹಸಿದವನಿಗೆ ರುಚಿ ತಿಳಿಯದು.
   ಹಣವಂತನಿಗೆ ಹಸಿವು ತಿಳಿಯದು.

ಪುಸ್ತಕ ಸಮೀಕ್ಷೆ

ಬಾಲವೀರ (ಕಥಾ ನಿರೂಪಣೆ)

ಲೇಖಕರು:– ಕೆ. ಕೃಷ್ಣಮೂರ್ತಿ, ಎಲ್. ಟಿ. (ಸಿ.)ಮಂಡ್ಯ.
ಬೆಲೆ:– ರೂ. 1-25

ಇದೊಂದು ಸರಳ ಭಾಷಾಂತರಿತ ಕಥಾ ನಿರೂಪಣೆ. ಕಥೆ ಹೆಣೆದ ಬಗೆ ವೈಶಿಷ್ಟ್ಯಪೂರ್ಣವಾಗಿದೆ.

ಕಾಲ್ಪನಿಕ ಘಟನೆಗಳ ದೃಷ್ಟಿಯಿಂದಲೂ ಕಥಾ ತಂತ್ರದ ನಿಟ್ಟಿನಲ್ಲಿಯೂ ಲೇಖಕರು ಓದುಗರನ್ನು ಸರಸವಾಗಿ ಓದಿಸಿಕೊಂಡು ಹೋಗುವುದರಲ್ಲಿ ಪ್ರಯತ್ನಿಸಿದ್ದಾರೆ.

ಸ್ಕೌಟ್ ಚಳವಳಿಯ ಕಿರಿಯರ ವಿಭಾಗಕ್ಕೆ ಸಂಬಂಧಿಸಿದ ಕಿಪ್ಲಿಂಗ್‌ನ ಮೌಗ್ಲಿಯ ಕಥೆಗಳನ್ನಾಧರಿಸಿ, ಮಕ್ಕಳಿಗೆ ಕಥೆ ಹೇಳುವಂತೆ ನಿರೂಪಿಸಿದ ರೀತಿ ಸೊಗಸಾಗಿದೆ.

ಉದಯವಾಗಬೇಕು ಎನ್ನುವ ಉತ್ಸಾಹ ಏಕೈಕ ಧರ್ಮವಾದಾಗ ಪರಿಪಕ್ವತೆಗೆ ಭಂಗ ಬರುವುದು ಸಹಜ. ಈ ಕಥಾ ಸಾಹಿತ್ಯದಲ್ಲಿ ಆದಿಯಿಂದ ಅಂತ್ಯದ ವರೆಗೂ ಕಾಣ ಸಿಗುವ ಶಬ್ದಗಳನ್ನು ನೋಡುವಾಗ ಅವಸರದಲ್ಲಿ ಕರಡು ಪ್ರತಿಯನ್ನು ಪರಿಶೀಲಿಸಿರಬೇಕೆಂದು ಭಾಸವಾಗುತ್ತದೆ,

ಸ್ಕೌಟಿಂಗ್ ಪ್ರಪಂಚದಲ್ಲಿ ಕನ್ನಡ ಭಾಷೆಯಲ್ಲಿ ಸ್ಕೌಟಿಂಗ್ ಶಿಕ್ಷಣಕ್ಕೆ ನಾಂದಿಯಾಗುವಂತಹ ಹೊತ್ತಿಗೆಗಳ ಬೇಡಿಕೆಗಳಿರುವ ಪ್ರಚಲಿತ ಕಾಲದಲ್ಲಿ ಲೇಖಕರ ಪ್ರಯತ್ನ ಶ್ಲಾಘನೀಯ—ಪ್ರೋತ್ಸಾಹನೀಯ. ಕಥಾ ನಿರೂಪಣೆಯ ಶೈಲಿ ಸರಳವಾಗಿದೆ. ಸುಂದರವಾಗಿದೆ. ಚಿಕ್ಕ ಮಕ್ಕಳಲ್ಲಿ ತಾತ್ವಿಕ—ಹಾಗೂ ನೈತಿಕ ಮೌಲ್ಯಗಳನ್ನು ಕಥೆಯ ಘಟನೆಗಳ ಹಿನ್ನೆಲೆಯಲ್ಲಿ ತುಂಬಿಸಲು ಲೇಖಕರು ಶ್ರಮವಹಿಸಿದ್ದಾರೆ.

ಶ್ರೀಯುತ ಕೃಷ್ಣಮೂರ್ತಿಗಳ ಈ ಸಂಕಲನ ಕಿರಿಯರಿಗೆ ಆಸಕ್ತಿ ಕೆರಳಿಸುವ ಕಥಾ ನಿರೂಪಣೆ, ಹೃದ್ಯ ಚಿತ್ರಣ. ಮುಂದೆಯೂ ಈ ಬಗೆಯ ಹಲವಾರು ಕೃತಿಗಳು ಇವರ ಲೇಖನಿಯಿಂದ ಹೊರ ಹೊಮ್ಮಲಿ.

"ಚೀಲ್"

ಮರಿಗಳ ಕೈಪಿಡಿ (ಕಥೆ, ಹಾಡು, ಹರ್ಷನಾದ)

ಲೇಖಕರು:– ಎಂ. ವೆಂಕಟಕೃಷ್ಣಪ್ಪ, ಬೆಂಗಳೂರು-4
ಬೆಲೆ:– ರೂ. 1-00.

ನಿರೂಪಣೆಯಲ್ಲಿ ಮಗದೊಂದು ಶೈಲಿಯನ್ನು ಬಳಸಿದ್ದರೂ ಬಾಲವೀರ ಮತ್ತು ಮರಿಗಳ ಕೈಪಿಡಿ ಒಂದಕ್ಕೊಂದು ಸಂಗತವಾಗಿವೆ. ವಿವರಣೆ ಸ್ಪಷ್ಟವಾಗಿದೆ. ಈ ಪುಸ್ತಕಗಳ ಹೂರಣ ಒಂದೆ. ಆದರೆ ಹೇಳಿದ ಕ್ರಮ, ವಿವರಣೆಗಳಲ್ಲಿ ತಮ್ಮದೇ ಸ್ವಂತಿಕೆಯನ್ನು ಬಳಸಿಕೊಂಡಿದ್ದಾರೆ. ಮೂಲಕಥೆಗೆ ಅಪಚಾರವಾಗದಂತೆ ಅಭಿವ್ಯಕ್ತಗೊಳಿಸಿದ್ದಾರೆ. ನಿರೂಪಣೆಯ ವ್ಯಾಖ್ಯೆ ಸುಲಲಿತವಾಗಿದೆ.

ಸ್ಕೌಟಿಂಗ್ ಪ್ರಪಂಚದ ಕಿರಿಯರ ವಿಭಾಗ ಈ ಹೊತ್ತಿಗೆಯನ್ನು ಆದರದಿಂದ ಸ್ವಾಗತಿಸುತ್ತದೆ. ಇವುಗಳು ವಾಚನೀಯ ಹಾಗೂ ಸಂಗ್ರಾಹ್ಯವಾಗಿದೆ. ಎಲ್ಲರಿಗಿಂತ ಮುಖ್ಯವಾಗಿ ಮಕ್ಕಳು ಹಾಗೂ ಶಿಕ್ಷಕರು ಈ ಪುಸ್ತಕವನ್ನು ಓದಬೇಕು. ಮರಿಗಳ ಶಿಕ್ಷಣದ ತಿರುಳಿನಂತಿದ್ದ ಈ ಹೊತ್ತಿಗೆಯನ್ನು ಬರೆದ ಶ್ರೀ ಎಂ. ವೆಂಕಟಕೃಷ್ಣಪ್ಪನವರಿಂದ ಸುಂದರ ಶೈಲಿಯ ನವುರಾದ ಕೃತಿಗಳು ಇನ್ನಷ್ಟು ಬರುತ್ತಿರಲಿ ಎಂದು ಹಾರೈಸೋಣ.

"ಚೀಲ್"

ನಿಧನ



ಎ. ಎನ್. ರಾಮರಾವ್, ಮೈಸೂರು ರಾಜ್ಯದ ಸ್ಕೌಟ್ ಕ॥ ಬೆಂಗಳೂರು ನಗರ ಕಬ್ ಮಾಸ್ಟರ್ಸ್ ಸಂಘದ ಸ್ಥಾಪಕ, ಫ್ರಾನ್ಸ್‌ನಲ್ಲಿ 1947ರಲ್ಲಿ ನಡೆದ ವಿಶ್ವ ಜಾಂಬೋರಿಯಲ್ಲಿ ಮೈಸೂರು ಸ್ಕೌಟ್‌ಗಳೊಡನೆ ಭಾಗಿಯಾಗಿದ್ದರು. 1951ರ ಸಿಲೋನ್—ದಕ್ಷಿಣ ಇಂಡಿಯಾ ಪ್ರವಾಸದ ಮುಖ್ಯಸ್ಥ, ಮೈಸೂರು ಸ್ಕೌಟ್ ಪತ್ರಿಕೆಯ ಸಂಪಾದಕ, ರೆಡ್‌ಕ್ರಾಸ್, ಸೆಂಟ್ ಜಾನ್ ಆಂಬುಲೆನ್ಸ್ ಮುಂತಾದ ನಾನಾ ಸೇವಾ ಸಂಸ್ಥೆಗಳ ಪ್ರಮುಖ, ಮಾರ್ಚ್ 12 ರಂದು 73ನೇ ವಯಸ್ಸಿನಲ್ಲಿ, ಬೆಂಗಳೂರಿನಲ್ಲಿ ನಿಧನರಾದರು.

Registered as a Magazine Reg. No. K.R.N.B. 38

ಕಡು ಬಡವರಿಗೂ ವಿದ್ಯೆ ಕಲಿಯುವ ಹಕ್ಕಿದೆ...

ಆ ಹಕ್ಕು ಅರ್ಥಪೂರ್ಣವಾಗಲು ರಾಜ್ಯ ಸರ್ಕಾರದ ಸಹಾಯ

ಒಂದು ಲಕ್ಷ ಪರಿಶಿಷ್ಟ ಜಾತಿ ಮತ್ತು ಜನಾಂಗದ ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ — ಈ ಸೌಲಭ್ಯ ಒಂದು ಲಕ್ಷ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಲಭ್ಯ.

ಮೂವತ್ತೊಂದು ಸಾವಿರ ಶಾಲಾನಂತರದ ವಿದ್ಯಾರ್ಥಿಗಳಿಗೆ ಭಾರತ ಸರಕಾರದ ವಿದ್ಯಾರ್ಥಿ ವೇತನ ದೊರೆಯುತ್ತಿದೆ. ಈ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗಳಿಗಾಗಿ 125 ರೂಪಾಯಿಗಳ ವರೆಗೂ ಹೆಚ್ಚಿನ ಧನ ಸಹಾಯ.

ಐವತ್ತು ಸಾವಿರ ಪರಿಶಿಷ್ಟ ಜಾತಿ, ಜನಾಂಗ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸರಕಾರಿ ಹಾಗೂ ಧನ ಸಹಾಯ ಪಡೆದ 1,076 ವಿದ್ಯಾರ್ಥಿ ನಿಲಯಗಳಲ್ಲಿ ವಸತಿ ಸೌಲಭ್ಯಗಳ ಏರ್ಪಾಡು.

ಕರ್ನಾಟಕ — ಬಡವರ ಏಳಿಗೆಗಾಗಿ
ನಿರಂತರ ಯತ್ನ ನಡೆಯುತ್ತಿರುವ ರಾಜ್ಯ.

— ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ.

Published for the Bharat Scouts and Guides, Karnataka State, State Headquarters, Irwin Circle, Bangalore - 560002 by Sri A. D. Anandan, Editor. Printed by Sri A. V. Rego, Technical Director, Naveen Mudran, Private Limited, 6/2, 5th Cross, O.T.C. Road, Bangalore - 560 053